ವಿಶೇಷ ಲೇಖನ

# ಜನನಿ – ಜನ್ಮಭೂಮಿ

ಶಶಿಕಲಾ ಶ್ರೀಧರ್

**'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ'**– ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ದೊಡ್ಡದು. ಆದ್ದರಿಂದ ಜನ್ಮವಿತ್ತ ಜನನಿ, ಜೀವನವಿತ್ತ ಜನ್ಮಭೂಮಿ ಈ ಎರಡರ ಹಿರಿಮೆ ಗರಿಮೆಗಳನ್ನು ಸ್ಮರಿಸುತ್ತ, ಜನನಿಗೂ ಜನ್ಮಭೂಮಿಗೂ ನಮ್ಮ ಭಕ್ತಿಯ ಕಾಣಿಕೆಯನ್ನು ಸಮರ್ಪಿಸೋಣ.

## ಜನನಿ

ಸಾವಿರಾರು ನಕ್ಷತ್ರಗಳು ಸೇರಿದರೂ ಒಂದು ಚಂದ್ರನಿಗೆ ಸಾಟಿಯೇ? ಹಾಗೆಯೇ 'ತಾಯಿ' ಎಂಬ ದೈವಕ್ಕೆ ಬೇರೆ ಯಾರಾದರೂ ಸಮವೇ? ಕರುಣೆ, ಮಮತೆ ಮತ್ತು ಕ್ಷಮಾಗುಣಗಳ ಮೂರ್ತಿಯಾದ ತಾಯಿ ಭುವಿಯಲ್ಲಿರುವ ಪ್ರತ್ಯಕ್ಷ ದೇವತೆ. ತನ್ನ ಕರುಳಿನ ಕುಡಿಯನ್ನು ಒಂಭತ್ತು ತಿಂಗಳು ಗರ್ಭದಲ್ಲಿ ಹೊತ್ತು, ಅದರ ಎಲ್ಲ ನೋವನ್ನು ಸಹಿಸಿ, ಆ ಜೀವವನ್ನು ಜಗತ್ತಿಗೆ ತಂದು, ತನ್ನ ವಾತ್ಸಲ್ಯಧಾರೆಯನ್ನುಣಿಸಿ ಅವಳು ಬೆಳೆಸುತ್ತಾಳೆ. ತಾಯಿಯ ಈ ಋಣವನ್ನು ತೀರಿಸಲು ಯಾವ ಮಗನಿಗೂ ಸಾಧ್ಯವಿಲ್ಲ.

'ಅಮ್ಮಾ' ಎಂಬುದೇ ಕಂದನ ಬಾಯಿಯಿಂದ ಹೊರಡುವ ಮೊದಲನೆಯ ಶಬ್ದ. ಇದು ಅಕ್ಷರಮಾಲೆಯ ಪ್ರಥಮ ಶಬ್ದವೂ ಆಗಿದೆ. ಆಚಾರ್ಯ ಶಂಕರರು ತಮ್ಮ 'ಮಾತೃಪಂಚಕಮ್' ಸ್ತೋತ್ರದಲ್ಲಿ ಹೆತ್ತ ತಾಯಿಯ ಪ್ರೀತಿ, ಕರುಣೆ, ಸಹನೆ ಮತ್ತು ಶಾಂತಿಗಳನ್ನು ಮುಕ್ತಕಂಠದಿಂದ ಕೊಂಡಾಡುತ್ತಾರೆ. ಈ ತಾಯಿಯ ಹಿರಿಮೆ ಎಷ್ಟೆಂದರೆ, ಒಬ್ಬ ಸಂನ್ಯಾಸಿಗೆ ಸಮಸ್ತ ಜೀವಕೋಟಿಗಳು ವಂದಿಸುತ್ತವೆ, ಆದರೆ ಅಂತಹ ಸಂನ್ಯಾಸಿ ತನ್ನ ತಾಯಿಗೆ ಶಿರಬಾಗಿ ನಮಸ್ಕರಿಸುತ್ತಾನೆ. ತೈತ್ತಿರೀಯೋಪನಿಷತ್ತಿನ ಶೀಕ್ಷಾವಲ್ಲಿಯಲ್ಲಿ ಬರುವ 'ಆಚಾರ್ಯೋಪದೇಶ' ದಲ್ಲಿ 'ಮಾತೃದೇವೋ ಭವ. 'ಪಿತೃದೇವೋ ಭವ' 'ಆಚಾರ್ಯ ದೇವೋ ಭವ' ಎಂದು ಉಪದೇಶ ನೀಡುವಾಗ ತಾಯಿಗೇ ಪ್ರಪ್ರಥಮ ಆದ್ಯತೆ ನೀಡಲಾಗಿದೆ. 'ದೇವ್ಯಪರಾಧ ಕ್ಷಮಾಪಣ' ಸ್ತೋತ್ರದಲ್ಲಿ ಶಂಕರ ಭಗವತ್ಪಾದರು **'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ'** – ಕೆಟ್ಟ ಮಗನು ಹುಟ್ಟಬಹುದು, ಆದರೆ ಕೆಟ್ಟ ತಾಯಿಯು ಮಾತ್ರ ಎಂದಿಗೂ ಇರುವುದಿಲ್ಲ – ಎಂದು ತಾಯಿಯ ಮಹಿಮೆಯನ್ನು ಕೊಂಡಾಡುತ್ತಾರೆ.

**"ಯುಗಯುಗಾಂತರಗಳ ಭಾರತವಿನ್ನೂ ಮೃತಪ್ರಾಯವಾಗಿಲ್ಲ. ಆಕೆಯು ಜೀವಂತವಾಗಿದ್ದು, ತನಗಾಗಿ ಮತ್ತು ಮನುಕುಲಕ್ಕಾಗಿ ಸಾಧಿಸಬೇಕಾದದ್ದು ಇನ್ನೂ ಇದೆ. ಈಗ ನಾವು ಜಾಗೃತಗೊಳಿಸಬೇಕಾಗಿರುವುದು ಆಂಗ್ಲೀಕರಣಕ್ಕೊಳಗಾದ, ಪಶ್ಚಿಮದ ನಮ್ರ ಅನುಯಾಯಿಗಳನ್ನಲ್ಲ. ಆದರೆ ತನ್ನ ಆತ್ಮವನ್ನು ಪುನಃ ಪಡೆಯಲು ಉದ್ಯುಕ್ತವಾಗಿ, ಶಕ್ತಿ ಮತ್ತು ಪ್ರಕಾಶಗಳ ಪರಮೋಚ್ಚ ಮೂಲದೆಡೆ ತಲೆಯೆತ್ತಿ ತನ್ನ ಧರ್ಮದ ಸಂಪೂರ್ಣ ಅರ್ಥ ಹಾಗೂ ವಿಸ್ತೃತ ರೂಪದ ಶೋಧಕ್ಕಾಗಿ ಸನ್ನದ್ಧವಾಗಿರುವ ಪ್ರಾಚೀನ ಅವಿಸ್ಮರಣೀಯ ಶಕ್ತಿಯನ್ನು."** – *ಶ್ರೀಅರವಿಂದರು*

**ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ ।**
**ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥**

'ದೇವೀ ಮಾಹಾತ್ಮ್ಯ'ದಲ್ಲಿ ಸಕಲ ಜೀವಿಗಳಲ್ಲಿ ಮಾತೃರೂಪದಿಂದ ನೆಲೆಸಿರುವ ಜಗನ್ಮಾತೆಗೆ ನಮಸ್ಕಾರ ಎಂಬ ಸ್ತೋತ್ರವನ್ನು ಕಾಣುತ್ತೇವೆ. ಹೀಗೆ ನಮ್ಮ ಸಂಪ್ರದಾಯದಲ್ಲಿ ತಾಯಿಗೆ ಎಲ್ಲೆಲ್ಲೂ ಎಲ್ಲದರಲ್ಲೂ ಆದ್ಯತೆ ಇದೆ.

ಹಾಗಾದರೆ ಈ ಮಮತೆಯ ಕಡಲಾದ ತಾಯಿಯ ಋಣವನ್ನು ಕಿಂಚಿತ್ತಾದರೂ ತೀರಿಸಲು ನಾವು ಮಾಡಬೇಕಾದುದೇನು? ಈ ಜನ್ಮದಾತೆಯ, ಮೇಲೆ ಹೇಳಿರುವ ಎಲ್ಲ ಗುಣಗಳನ್ನು ನಾವೂ ಮೈಗೂಡಿಸಿಕೊಂಡು ಮುಂದೆ ನಮ್ಮ ಮಕ್ಕಳಿಗೂ ಈ ಹಾದಿಯಲ್ಲೇ ಕರೆತರುವ ಕರ್ತವ್ಯವನ್ನು ನಾವು ಮಾಡಬೇಕು; ತಾಯಿಯ ಬಗ್ಗೆ ನಮ್ಮ ಹೃದಯ ಅತ್ಯಂತ ಕೃತಜ್ಞತೆಯಿಂದ ತುಂಬಿರಬೇಕು; ಅವಳು ನಮಗಾಗಿ ಅನುಭವಿಸಿದ ಕಷ್ಟಪರಂಪರೆಗಳ ಸ್ಮರಣೆ ನಮಗೆ ಬರಬೇಕು; ಇಳಿಗಾಲದಲ್ಲಿ ಅವಳ ಸೇವೆಯನ್ನು ಸ್ವಲ್ಪವೂ ಕಡೆಗಣಿಸದೆ ಶ್ರದ್ಧೆ ಹಾಗೂ ಪ್ರೀತಿಗಳಿಂದ ಮಾಡಬೇಕು. ಹಾಗಾದರೆ ಮಾತ್ರ ತಾಯಿಯ ಋಣದಿಂದ ಕಿಂಚಿತ್ತಾದರೂ ನಾವು ಮುಕ್ತರಾಗುತ್ತೇವೆ.

## ಜನ್ಮದಾತೆ – ಜಗನ್ಮಾತೆ

ಇಂತಹ ಜನ್ಮದಾತೆಯ ಹಿರಿಮೆಯನ್ನು ಪಾಶ್ಚಾತ್ಯ ದೇಶಗಳಲ್ಲಿಯೂ ಎತ್ತಿ ಹಿಡಿದು ತೋರಿದವರೆಂದರೆ ಸ್ವಾಮಿ ವಿವೇಕಾನಂದರು. ಆ ದೇಶಗಳಲ್ಲಿ ಸ್ವಾಮೀಜಿ ಭಾರತದ ಮಹಿಳೆಯರ ಬಗ್ಗೆ ಮಾತನಾಡುತ್ತಾ ಅನೇಕ ಒಳ್ಳೆಯ ವಿಚಾರಗಳನ್ನು ವಿವರಿಸುವ ಬಗೆಯನ್ನು ಕಂಡಾಗ ಅವರಿಗೆ ಭಾರತದ ಬಗ್ಗೆ, ಭಾರತದ ಮಹಿಳೆಯರ ಬಗ್ಗೆ ಇದ್ದ ಅಪಾರ ಭಕ್ತಿ ಶ್ರದ್ಧೆಗಳು ಸ್ಫುಟವಾಗಿ ವ್ಯಕ್ತವಾಗುತ್ತವೆ. ಸ್ವಾಮೀಜಿ ಹೇಳುತ್ತಾರೆ:

"ಭರತಖಂಡದಲ್ಲಿ ಆದರ್ಶ ಮಹಿಳೆ 'ತಾಯಿ.' ದೇವರನ್ನು 'ತಾಯಿ' ಎಂದು ಕರೆಯುವರು. ನಾವು ಹುಡುಗರಾಗಿದ್ದಾಗ ಪ್ರತಿದಿನ ಬೆಳಗ್ಗೆ ಒಂದು ಬಟ್ಟಲು ನೀರನ್ನು ತಾಯಿಯ ಹತ್ತಿರ ತೆಗೆದುಕೊಂಡು ಹೋಗುತ್ತಿದ್ದೆವು. ಅವಳು ಅದನ್ನು ತನ್ನ ಬಲಗಾಲಿನ ಹೆಬ್ಬೆಟ್ಟಿನಿಂದ ಮುಟ್ಟಿದ ಮೇಲೆ ನಾವು ಅದನ್ನು ಕಣ್ಣಿಗೊತ್ತಿಗೊಂಡು ಸೇವಿಸುತ್ತಿದ್ದೆವು. ಅದು ನಮ್ಮ ಪಾಲಿಗೆ ಪವಿತ್ರ ಗಂಗಾತೀರ್ಥವಾಗುತ್ತಿತ್ತು."

"ಭರತಖಂಡದಲ್ಲಿ ಸ್ತ್ರೀತ್ವದ ಶಕ್ತಿಯೆಲ್ಲವೂ ಮಾತೃತ್ವದಲ್ಲಿ ಕೇಂದ್ರೀಕೃತವಾಗಿದೆ. ಹಿಂದೂ ಸಂಸಾರದಲ್ಲಿ ತಾಯಿಯೇ ಮನೆಯನ್ನು ಆಳುವಳು. ಅವಶ್ಯಕತೆ ಬಂದರೆ ಇತರರಿಗಾಗಿ ತನ್ನ ಜೀವವನ್ನೂ ತೆರಲು ಸಿದ್ಧಳಾಗಿರುವ ನಮಗೆ ಜನ್ಮಕೊಟ್ಟ ಮಹಾಮಾತೆಯ ಸ್ಥಾನ ಅತ್ಯಂತ ಉನ್ನತವಾದುದು. ನಾವು ಎಷ್ಟೇ ಪಾಪಿಗಳಾದರೂ, ದುರಾತ್ಮರಾದರೂ ಅವಳ ಪ್ರೇಮದ ಚಿಲುಮೆ ಎಂದಿಗೂ ಬತ್ತುವುದೇ ಇಲ್ಲ. ಅತ್ಯಮೂಲ್ಯ, ನಿಸ್ವಾರ್ಥ, ಸಹಿಷ್ಣುತಾಮೂರ್ತಿ, ಕ್ಷಮಾಮಯಿ ಆಕೆ. ಈ ತಾಯಿಯ ಪ್ರೇಮ ಭಗವಂತನ ಪ್ರೇಮಕ್ಕೆ ಅತಿ ಸಮೀಪದಲ್ಲಿರುವುದು."

*ಲೇಖಕಿ ವೃತ್ತಿಯಲ್ಲಿ ವಕೀಲರು, ಬೆಂಗಳೂರಿನ ರಾಮಕೃಷ್ಣ ಮಠದ ಭಕ್ತರು; ಇವರ ಅನೇಕ ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ.*

## ಜನ್ಮಭೂಮಿ ಭಾರತ

ಇದುವರೆಗೂ ಜನನಿಯ ಬಗ್ಗೆ ವಿಚಾರ ಮಾಡಿದೆವು. ಈ ಜನನಿಯಷ್ಟೇ ಪವಿತ್ರವೂ, ಸ್ವರ್ಗಕ್ಕಿಂತಲೂ ಶ್ರೇಷ್ಠವೂ ಆದ 'ಜನ್ಮಭೂಮಿ'ಯ ಬಗ್ಗೆ ವಿಚಾರ ಮಾಡೋಣ. ತಾಯಿಯಷ್ಟೇ ಪವಿತ್ರ ತಾಯಿನಾಡು. ನಮ್ಮ ಜನ್ಮಭೂಮಿ 'ಭಾರತ'. 'ಭಾ' ಎಂದರೆ ಬೆಳಕಿನಲ್ಲಿ 'ರತ' ಎಂದರೆ ನಿರತರಾದವರ ನಾಡು ಭಾರತ. ಬೆಳಕು ಕಂಡವರ, ಬೆಳಕು ಕೋರುವವರ, ಬೆಳಕಿಗಾಗಿ ಸಾಧನೆ ಮಾಡುತ್ತಿರುವ ಭಕ್ತರ ಭೂಮಿ ಇದು. ಉನ್ನತ ತತ್ತ್ವಗಳನ್ನು, ಅಗಾಧ ಆದರ್ಶಗಳನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡಿರುವ ಆರ್ಯರ ಭೂಮಿ ಇದು. ನಮ್ಮ ಮಾತೆಯ ಬಗ್ಗೆ ನಮಗೆಷ್ಟು ಪ್ರೇಮ, ಆದರಗಳಿರುವವೋ ಅಷ್ಟೇ ಗೌರವಾದರಗಳು ನಮ್ಮ ಮಾತೃಭೂಮಿಯ ಬಗ್ಗೆಯೂ ಇರಬೇಕು.

ಮಹರ್ಷಿಗಳ ತಪೋಭೂಮಿ, ಧಾರ್ಮಿಕರ ಧರ್ಮಭೂಮಿ, ಕರ್ಮಿಗಳ ಪುಣ್ಯಕ್ಷೇತ್ರ, ವಿದ್ವಾಂಸರ ಜ್ಞಾನಕ್ಷೇತ್ರ ಮತ್ತು ಆದರ್ಶ ಜೀವನ ನಡೆಸಿದ ಮಹಾತ್ಮರ ಯೋಗಭೂಮಿಯಾದ ಭಾರತ ವಿಶ್ವಕ್ಕೇ ವೇಗುಲಪ್ರಾಯವಾಗಿದೆ. ಮೋಕ್ಷಕ್ಕಾಗಿ ಕಾತರಿಸುವ ಎಲ್ಲ ಜೀವಿಗಳೂ, ಮಾನವರಾಗಲೀ, ದೇವತೆಗಳಾಗಲೀ ಈ ಯೋಗಭೂಮಿಯಲ್ಲಿ ಜನಿಸಿ, ಜ್ಞಾನವನ್ನು ಹೊಂದಿ, ಜೀವನದ ಪರಮ ಲಕ್ಷ್ಯವಾದ ಪರಮಾತ್ಮನನ್ನು ಸೇರಬೇಕು ಎಂದು ನಮ್ಮ ಪುರಾಣಗಳು ಹೇಳುತ್ತವೆ. ನಮ್ಮ ಋಷಿಮುನಿಗಳು **"ದ್ಯೌಃ ಪಿತಾ ಪೃಥಿವೀ ಮಾತಾ"** – ಆಕಾಶವೇ ತಂದೆ, ಭೂಮಿಯೇ ತಾಯಿ ಎಂಬ ವಾಣಿಯ ಮೂಲಕ ಭುವಿಗೂ ದಿವಿಗೂ ಸೇತುವೆಯನ್ನು ನಿರ್ಮಿಸಿದರು; ಧರ್ಮದ ಧ್ವಜವನ್ನು ಮೇಲೇರಿಸಿ, **'ಸತ್ಯಮೇವ ಜಯತೇ'** (ಸತ್ಯವೊಂದೇ ಗೆಲ್ಲುವುದು) ಎಂಬ ಧ್ಯೇಯವಾಕ್ಯವನ್ನು ಘೋಷಿಸಿದರು; **'ಧರ್ಮಾರ್ಥಕಾಮ ಮೋಕ್ಷರೂಪ ಸರ್ವ ಪುರುಷಾರ್ಥ ಫಲಮಿದಂ ರಾಜ್ಯಂ'** – ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಎಲ್ಲಾ ಪುರುಷಾರ್ಥಗಳ ಫಲಸ್ವರೂಪಿಯಾದುದು ಈ ರಾಜ್ಯ ಎಂಬ ಮಾತಿನಂತೆ ಪುರುಷಾರ್ಥಗಳನ್ನು ಪಡೆಯುವುದು ಈ ರಾಷ್ಟ್ರದ ಧ್ಯೇಯವೆಂದು ಸಾರಿದರು. **'ಉತ್ತಿಷ್ಠತ–ಮಾಸ್ವಪ್ತ ಅಗ್ನಿಮಿಚ್ಛಧ್ವಂ ಭಾರತಾಃ'** –"ಎದ್ದೇಳಿರಿ, ನಿದ್ರಿಸದಿರಿ, ಅಗ್ನಿಯನ್ನು ಬಯಸಿ ಆರಾಧಿಸಿರಿ" ಎಂಬ ಸುಪ್ರಭಾತದ ಭೇರಿ ಬಾರಿಸಿದರು. ಇಂತಹವರ ನೆಲೆವೀಡಾಗಿದ್ದ ಭಾರತದ ಹಿರಿಮೆ ಸಾಮಾನ್ಯವಾದುದೇ?

ದೇವತೆಗಳು ಈ ಪುಣ್ಯಭೂಮಿಯನ್ನು ಹೀಗೆ ಕೊಂಡಾಡುತ್ತಾರೆ:

**ಗಾಯಂತಿ ದೇವಾಃ ಕಿಲ ಗೀತಕಾನಿ**
**ಧನ್ಯಾಸ್ತು ತೇ ಭಾರತಭೂಮಿಭಾಗೇ ।**
**ಸ್ವರ್ಗಾಽಪವರ್ಗಾಸ್ಪದಮಾರ್ಗಭೂತೇ**
**ಭವಂತಿ ಭೂಯಃ ಪುರುಷಃ ಸುರತ್ವಾತ್ ॥**

ಭಾರತಭೂಮಿಯಲ್ಲಿ ಹುಟ್ಟಿದವರು ನಿಜಕ್ಕೂ ಧನ್ಯರು. ಏಕೆಂದರೆ ಈ ದೇಶವು **ಸ್ವರ್ಗ** ಮತ್ತು **ಅಪವರ್ಗಗಳಿಗೆ** ಅವಕಾಶ ಮಾಡಿಕೊಡುತ್ತದೆ. ಸ್ವರ್ಗ ಎಂದರೆ ಧರ್ಮ ಅರ್ಥ ಕಾಮ ಎಂಬ ತ್ರಿವರ್ಗ. ಅಪವರ್ಗ ಎಂದರೆ ಮೋಕ್ಷ. ಹೀಗೆ ಚತುರ್ವಿಧ ಪುರುಷಾರ್ಥಗಳಿಂದ ಕೂಡಿದ ಇಲ್ಲಿನ ಜನರು ಯೋಗಕ್ಕೆ ಅವಿರೋಧವಾದ ಭೋಗವನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಇಹ ಪರ ಎರಡರಲ್ಲೂ ಆನಂದ ಹೊಂದಿ, ಶಾಶ್ವತವಾದ ನೆಲೆಯನ್ನು ಪಡೆಯುತ್ತಾರೆ.

ಹೀಗೆ ವೇದಕಾಲದಿಂದಲೂ **ಸ್ವರ್ಗಾದಪಿ ಗರೀಯಸೀ** – ಸ್ವರ್ಗಕ್ಕಿಂತಲೂ ಶ್ರೇಷ್ಠವಾದುದು ಎಂದು ನಮ್ಮ ನಾಡು ಪರಿಗಣಿಸಲ್ಪಟ್ಟಿದೆ. ಸ್ವಾಮಿ ವಿವೇಕಾನಂದರು ಈ ದೇಶದ ಜನರನ್ನು ಸಂಬೋಧಿಸುವ ರೀತಿ ಇದು: "ಆರ್ಯಮಾತೆಯ ಅಮೃತಪುತ್ರರಿರಾ, ಮಹರ್ಷಿ ಕುಲಸಂಜಾತ ಧನ್ಯಾತ್ಮರಿರಾ" –ಈ ಘೋಷಣೆಯೊಂದಿಗೆ ಅವರ ಶಕ್ತಿಸಂದೇಶ ಪ್ರಾರಂಭವಾಗುತ್ತದೆ. ಭರತಖಂಡದ ಹಿರಿಮೆ ಗರಿಮೆಗಳ ಬಗ್ಗೆ ಸ್ವಾಮೀಜಿಯವರ ಪಾಂಚಜನ್ಯಸದೃಶವಾದ ವಾಣಿಯನ್ನು ಕೇಳೋಣ:

"ಈ ಪ್ರಪಂಚದಲ್ಲಿ ಯಾವುದಾದರೂ ಪುಣ್ಯಭೂಮಿ ಎಂದು ಕರೆಸಿಕೊಳ್ಳಲು ಅರ್ಹತೆ ಪಡೆದಿದ್ದರೆ, ಜೀವಿಗಳು ತಮ್ಮ ಬಾಳಿನ ಅಂತ್ಯಕರ್ಮವನ್ನು ಸವೆಸಲು ಬರಬೇಕಾದ ಸ್ಥಳವೊಂದಿದ್ದರೆ, ಭಗವಂತನೆಡೆಗೆ ಸಂಚರಿಸುತ್ತಿರುವ ಪ್ರತಿಯೊಂದು ಜೀವಿಯೂ ತನ್ನ ಕೊನೆಯ ಯಾತ್ರೆಯನ್ನು ಪೂರೈಸಿಕೊಳ್ಳುವುದಕ್ಕೆ ಯಾವುದಾದರೂ ಕರ್ಮಭೂಮಿಗೆ ಬರಬೇಕಾಗಿದ್ದರೆ, ಯಾವುದಾದರೂ ದೇಶದಲ್ಲಿ ಮಾನವಕೋಟಿ ಮಾಧುರ್ಯ, ಔದಾರ್ಯ, ಪವಿತ್ರತೆ, ಶಾಂತಿ – ಎಲ್ಲಕ್ಕಿಂತ ಹೆಚ್ಚಾಗಿ ಧ್ಯಾನ ಮತ್ತು ಅಂತರ್ಮುಖಿ ಜೀವನದಲ್ಲಿ ತನ್ನ ಪರಾಕಾಷ್ಠೆಯನ್ನು ಮುಟ್ಟಿದ್ದರೆ ಅದೇ ಈ ಭರತಖಂಡ. ಇಲ್ಲಿ ಧರ್ಮ ಮತ್ತು ತತ್ತ್ವಗಳು ತಮ್ಮ ಪರಾಕಾಷ್ಠೆಯನ್ನು ಮುಟ್ಟಿವೆ. ಜಡ ನಾಗರಿಕತೆಯ ಪ್ರಪಂಚಕ್ಕೆ ಆಧ್ಯಾತ್ಮವನ್ನು ಧಾರೆಯೆರೆಯುವ ಮಹಾಪ್ರವಾಹ ಇಲ್ಲಿಂದ ಉದಿಸುತ್ತಿದೆ. ಪ್ರತಿಯೊಂದು ಪವಿತ್ರ ಆದರ್ಶದ ಉಗಮಸ್ಥಾನ ಈ ಭರತಖಂಡ."

ಪ್ರಸಿದ್ಧ ಭಾಷಣಕಾರರಾಗಿದ್ದ ದಿವಂಗತ ಶ್ರೀ ವಿದ್ಯಾನಂದ ಶೆಣೈ ಅವರು 'ಭಾರತ ದರ್ಶನ' ವನ್ನು ನಮಗೆ ಹೀಗೆ ಮಾಡಿಸುತ್ತಾರೆ:

"ಸುರಲೋಕದ ತೊರೆ ಗಂಗೆ, ಯಮುನೆ, ಗೋದಾವರಿ, ಬ್ರಹ್ಮಪುತ್ರ, ತಪತಿ, ನರ್ಮದೆ ಮುಂತಾದ ಪುಣ್ಯ ನದಿಗಳು, ಮುಗಿಲ ಹಾರವೆಂದು ಕರೆಯಲ್ಪಟ್ಟಿರುವ ಹಿಮಾಲಯ ಪರ್ವತ, ಸಹ್ಯಾದ್ರಿ, ಮಹೇಂದ್ರ, ಮಲಯ, ವಿಂಧ್ಯ ಮೊದಲಾದ ಪವಿತ್ರ ಪರ್ವತಗಳು – ಇವುಗಳೆಲ್ಲಾ ಜಡವಲ್ಲ, ಭಗವದಂಶಗಳು. ಪವಿತ್ರ ವೇದಗಳು, ರಾಮಾಯಣ, ಮಹಾಭಾರತ, ಭಾಗವತಾದಿ ಗ್ರಂಥಗಳು ಜನರ ಜೀವನದಲ್ಲಿ ರಕ್ತಗತವಾಗಿವೆ; ನಾಟ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಸಂಪತ್ತಿನಿಂದ ತುಂಬಿದೆ. ನಮಗೆ ಜನ್ಮಕೊಟ್ಟ ತಾಯಿ, ರಕ್ಷಣೆ ಕೊಡುವ ತಂದೆ 'ತಮಸೋ ಮಾ ಜ್ಯೋತಿರ್ಗಮಯ' ಎಂದು ಜ್ಞಾನದಾನ ಮಾಡುವ ಗುರು – ಈ ಮೂರೂ ಭಾರತದೇಶವೇ ಆಗಿದೆ. **'ಚಂದನ ಹೈ ಇಸ್ ದೇಶಕೇ ಮಾಟೀ ತಪೋಭೂಮಿ ಹರ್ ಗ್ರಾಮ ಹೈ'** – ಈ ದೇಶದ ಮಣ್ಣೇ ಶ್ರೀಗಂಧ, ಪ್ರತಿಯೊಂದು ಗ್ರಾಮವೂ ತಪೋಭೂಮಿಯಾಗಿದೆ ಎಂದು ಕವಿಯೊಬ್ಬ ಕೊಂಡಾಡಿದ್ದಾನೆ. ಇಂತಹ ಭಾರತವನ್ನು 'ಉನ್ನತ ತಪೋಭೂಮಿ' ಎಂದು ಭಾವಿಸಿ ಸ್ವರ್ಗಲೋಕವೇ ಆರತಿ ಬೆಳಗಿತಂತೆ!"

ಸ್ವಾಮಿ ವಿವೇಕಾನಂದರು ಪಾಶ್ಚಾತ್ಯ ದೇಶಗಳಿಂದ ಹಿಂತಿರುಗಿ ಬಂದಾಗ ಮೊದಲು, ಈ ಭೂಮಿಯ ಮಣ್ಣನ್ನು ಕಣ್ಣಿಗೊತ್ತಿಕೊಳ್ಳುತ್ತಾ "ಭಾರತದ ಧೂಳೇ ನನ್ನ ಸರ್ವೋಚ್ಚ ದೇವಲೋಕ' ಎಂದರು.

**ಧನ್ಯ ಭಾರತಭೂಮಿ! ಹಾಗೆಯೇ ಈ ಭೂಮಿಯಲ್ಲಿ ಜನ್ಮವೆತ್ತಿರುವ ನಾವೆಲ್ಲರೂ ಕೂಡ ಧನ್ಯರು!!**